ಎಚ್.ಎಸ್. ರಾಘವೇಂದ್ರ ರಾವ್

# ‘ಒಡವ್ಯೊಲ್ಲೊ ಮಗನೆ, ಉಸಿರಿದ್ದ ಒಡಲು’

‘ನನ್ನ ಓದು’ ಕನ್ನಡದ ಮುಖ್ಯ ಪುಸ್ತಕಗಳನ್ನು ಪರಿಚಯಿಸುವ ಮಾಲಿಕೆ. ಪ್ರತಿ ತಿಂಗಳು ಬೇರೆ ಬೇರೆ ಓದುಗರು ಹೊಸ ಕನ್ನಡ ಪುಸ್ತಕಗಳ ಬಗ್ಗೆ ಬರೆಯಲಿದ್ದಾರೆ.

ಸುಮಾರು ನಲವತ್ತು ವರ್ಷಗಳ ಹಿಂದೆ, ‘ಸೃಜನಶೀಲತೆ’, ‘ಬಹುರೂಪತೆ’ ಮತ್ತು ‘ಆಕ್ಟಿವಿಸಂ’ಗಳ ಆಡುಂಬೊಲವಾಗಿದ್ದ ಮೈಸೂರಿನ ಮಹಾರಾಜಾ ಕಾಲೇಜಿನಲ್ಲಿ ಮೂಡಿಬಂದ ಕವಿ–ಕತೆಗಾರರಲ್ಲಿ ಒಬ್ಬರಾದ ಎಸ್. ಗಂಗಾಧರಯ್ಯನವರು ಆಗ ಬರೆದ ‘ಪ್ರತಿದಿನದ ಸೂರ್ಯ’ ಎಂಬ ಕವಿತೆ ನನ್ನೊಳಗೆ ನೆಲೆನಿಂತಿದೆ. ಲೋಕದ ಬಗ್ಗೆ ಹಾಗೂ ಭಾಷೆಯೆಂಬ ಮಾಧ್ಯಮದ ಬಗ್ಗೆ ಗಾಢವಾದ ಕಾಳಜಿಯನ್ನು ಇಂದಿನವರೆಗೂ ಪೊರೆದುಕೊಂಡಿರುವ ಗಂಗಾಧರಯ್ಯನವರು ನಮ್ಮ ಹಳ್ಳಿಗಳು ಹಾಯುತ್ತಿರುವ ಬೆಂಕಿಕೊಂಡವನ್ನು ಹತ್ತಿರದಿಂದ ಒಳಗೊಂಡು, ‘ವಕೀಲರಾಗದೆ’ ಒದ್ದೆಗಣ್ಣುಗಳಿಂದ ಸಂಯಮದಿಂದ ಈ ಕತೆಗಳಲ್ಲಿ ಕಟ್ಟಿಕೊಟ್ಟಿದ್ದಾರೆ. ಹತ್ತು ವರ್ಷಗಳಲ್ಲಿ ಬರೆದ ಹನ್ನೆರಡು ಕತೆಗಳು, ಅಲ್ಲಲ್ಲ ಒಂದೇ ಕತೆಯ ಹನ್ನೆರಡು ಅಧ್ಯಾಯಗಳು, ಕೆಲವು ಕಾರಣಗಳಿಂದ ವಿಶಿಷ್ಟವಾಗಿವೆ. ಪ್ರಾತಿನಿಧಿಕವಾದರೂ ವಿಶಿಷ್ಟ ಪ್ರಾದೇಶಿಕ ಚಹರೆಗಳನ್ನು ಕಳೆದುಕೊಳ್ಳದ ಹಳ್ಳಿಯೇ ಈ ಕಥಾನಕದ ಕೇಂದ್ರ ಪಾತ್ರ. ಇವು ಕತೆಗಳಲ್ಲ, ಕಥನಗಳು. ಪತನಶೀಲವಾದ ಹಳ್ಳಿಗಳು ಎಲ್ಲರಿಗೂ ನಿಲುಕುವ ಅನುಭವವಾದರೂ ಅವುಗಳನ್ನು ‘ಹೇಳುವ ಬಗೆ’ಯು ಪ್ರತಿಯೊಬ್ಬ ಕತೆಗಾರನಿಗೂ ವಿಶಿಷ್ಟವಾಗುತ್ತದೆ. ಗಂಗಾಧರಯ್ಯನವರು ನಿರೂಪಣೆಯ ಹಲವು ಬಗೆಗಳನ್ನು ಬಳಸಿಕೊಂಡು ನಾವು ಓದುವ ರೀತಿಯನ್ನು ನಿಯಂತ್ರಿಸುತ್ತಾರೆ. ಇಂದು ಅಭ್ಯಾಸವಾಗಿರುವ ‘ಗಬಗಬ ನುಂಗುವ’ ಓದನ್ನು ನಿರಾಕರಿಸಿ, ‘ಸಾವಧಾನದ ಓದ’ನ್ನು ಡಿಮ್ಯಾಂಡ್ ಮಾಡಲು ಈ ಕಥೆಗಳಿಗೆ ಸಾಧ್ಯವಾಗಿದೆ. ಓದಿನ ಈ ಸಾವಧಾನವು ಜೀವನಶೈಲಿಯಲ್ಲೇ ಒಮ್ಮೆ ಇದ್ದು ಇಂದು ಇಲ್ಲವಾಗಿರುವ ಸಾವಧಾನಕ್ಕೆ ಮರುಹುಟ್ಟು ಕೊಡುತ್ತದೆ. ಹಳ್ಳಿಯ ಹಲವು ಸಮುದಾಯಗಳಿಗೆ ದೊರಕಿದ ಬಿಡುಗಡೆಯ ಫಲವಾಗಿ ಬರಬೇಕಾಗಿದ್ದ ‘ಆರೋಗ್ಯ’ವು ನಾಗರಿಕತೆಯ ದುರಾಕ್ರಮಣದ ಫಲವಾಗಿ ಕಾಣೆಯಾಗಿದೆ. ಹೀಗೆ ಆಗಲು ಹೊರಗಿನ ಶಕ್ತಿಗಳಷ್ಟೇ ಮನುಷ್ಯನ ಸ್ವಭಾವದಲ್ಲೇ ಅಡಗಿರುವ ಸ್ವಾರ್ಥ–ಸಣ್ಣತನಗಳೂ ಕಾರಣವೆನ್ನುವುದನ್ನು ಕತೆಗಾರರು ಬಲ್ಲರು. ಆದರೂ ಎದೆಯಿಂದ ಎದೆಗೆ ಸತತವಾಗಿ ಹರಿಯುವ ಅಮೃತವಾಹಿನಿಯ ಅರಿವು ಅವರನ್ನು ಸಿನಿಕರಾಗದಂತೆ ಕಾಪಾಡಿದೆ. ಆದ್ದರಿಂದಲೇ ಇಲ್ಲಿನ ಭಾಷೆಯಲ್ಲಿ ಹಾಗೂ ವಿವರಗಳಲ್ಲಿ ಭಾವಗೀತೆ ಮತ್ತು ರೂಕ್ಷತೆಗಳು ಒಡಬಾಳುತ್ತವೆ. ‘ಓದು’ ಮತ್ತು ‘ತಾಯಿ’ ಎರಡೂ ಬೇಕು ಎನ್ನುವ, ಅಜ್ಜಿಯ ಕೋಲಿನಲ್ಲಿಯೇ ಅಜ್ಜಿಯನ್ನು ಪುನರುಜ್ಜೀವಿಸುವ, ದೇವರಕುದುರೆಯನ್ನೇರಿ ಹಾರಿಹೋಗುವ, ನವಿಲು, ಹುಲ್ಲೆಗಳನ್ನು ಸಾಕುವ ಹುಡುಗ–ಹುಡುಗಿಯರು ಗಂಗಾಧರಯ್ಯನವರಿಗೆ ಕನಸೂ ಹೌದು, ನನಸೂ ಹೌದು. ಈ ದುಃಖ ಮತ್ತು ಈ ಆಶಾವಾದಗಳು ಲೇಖಕರ ದರ್ಶನ.

ಮಾರ್ಕೆಸ್ ಸೇರಿದಂತೆ ಹತ್ತು ಹಲವರ ಬರವಣಿಗೆಯನ್ನು ನಿಕಟವಾಗಿ ಓದಿರುವ